ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಎರಡು, ಮೂರು ಕಿ. ಮೀ. ತನಕ ಹೆಚ್ಚಿಗೆ ಪ್ರಯಾಣ ಮಾಡುವುದಕ್ಕೆ ರಿಯಾಯಿತಿ ಕೊಟ್ಟಿರುತ್ತೆ. ಈ ರಿಯಾಯಿತಿ ಯಿಂದ ಎಷ್ಟೋ ವಿದ್ಯಾರ್ಥಿಗಳಿಗೆ ಅನುಕೂಲವಾಗಿರುತ್ತದೆ. ಇಂತಹ ನಿರ್ದಿಷ್ಟವಾದ ದೂರುಗಳು ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯ ಗಮನಕ್ಕೆ ತಂದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಸರಿಪಡಿಸಲಾಗುವುದು.

17 ವೇದಾವತಿ ನಗರದಲ್ಲಿ ೩೦ ವರ್ಷಗಳ ಹಿಂದಿನಿಂದ ಗುಡಿಸಲುಗಳನ್ನು ಕಟ್ಟಿಕೊಂಡಿದ್ದವರಿಗೆ ಆಗುತ್ತಿರುವ ಕಿರುಕುಳದ ಬಗ್ಗೆ

ಶ್ರೀ ಆರ್. ರಾಮಯ್ಯ.—ಅಧ್ಯಕ್ಷರೇ, ಹಿರಿಯೂರು ನಗರದ ಬಳಿಯಿರುವ ವೇದಾವತಿ ನಗರದಲ್ಲಿ ೩೦ ವರ್ಷಗಳ ಹಿಂದಿನಿಂದಲೂ ಕೆಲವು ಬಡಜನರು ಮನೆಗಳನ್ನು ಕಟ್ಟಿಕೊಂಡಿದ್ದರು. ಈ ಜಮೀನು ಖಾಸಿಂಸಾಬಿರವರಿಗೆ ಸೇರಿದ್ದು ಸದರಿಯವರು "ಹಿರಿಯೂರು ಸರ್ಕಲ್ ಸಮಗ್ರ ಸೇವಾ ಸಹಕಾರ ಸಂಘ"ಕ್ಕೆ ಕ್ರಯಮಾಡಿಸಿದ್ದಾರೆ. ಸದರಿ ಸಂಘದ ಕಾರ್ಯದರ್ಶಿಗಳಿಂದ ಹಿರಿಯೂರಿಂ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿ ಛೇರ್ಮನ್‌ರಿಗೆ ೧೯೫೧ರಲ್ಲಿ ವರ್ಗಾವಣೆಯಾಗಿದೆ. ಇದು ರೂರಲ್ ಹಿರಿಯೂರು ಕಮಿಟಿ ಹೇಗೆ ಬಂತು ? ಈ ಕಮಿಟಿಯು ೧೯೬೧ರಲ್ಲಿ ಬಹಿರಂಗವಾಗಿ ನಿವೇಶನಗಳನ್ನು ಹರಾಜು ಮಾಡಿದೆ. ಈ ಹರಾಜು ನಡೆಯುವ ಕಾಲದಲ್ಲಿ ಈಗಿರುವ ೮೬ ಗುಡಿಸಲುಗಳು ಇದ್ದವು. ಅದೂ ಸಹ ಅವುಗಳನ್ನು ತೆರವು ಮಾಡದೆಯೇ ಹರಾಜು ಮಾಡಿ ನಿವೇಶನಗಳನ್ನು ಕೊಟ್ಟರು. ಪಡೆದವರು ಈವರೆಗೆ ನಿವೇಶನಗಳನ್ನು ವಶಕ್ಕೆ ಪಡೆಯಲಿಲ್ಲ. ಆದರೆ ಈಗ ಈ ನಿವೇಶನಗಳಿಗೆ ಪ್ರಾಮುಖ್ಯತೆ ಮತ್ತು ಬೆಲೆ (ವ್ಯಾಲ್ಯೂಯೇಷನ್) ಹೆಚ್ಚಾಗಿರುವುದರಿಂದ ಇಂದು ಅಲ್ಲಿರುವ ಬಡ ಜನರನ್ನು ವಕ್ಕಲೆಬ್ಬಿಸಲು ಪ್ರಾರಂಭಿಸಿದ್ದಾರೆ. ಗುಡಿಸಲುನಿವಾಸಿಗಳು "ಡಾ. ಅಂಬೇಡ್ಕರ್ ಗುಡಿಸಲು ನಿವಾಸಿಗಳ ಸಂಘ" ವನ್ನು ಪ್ರಾರಂಭಿಸಿಕೊಂಡಿರು ತಮ್ಮ ಹಿತರಕ್ಷಣೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಆದಾಗ್ಯೂ ಇವರಿಗೆ ಕಿರಿಕಿರಿ ತಪ್ಪಿಲ್ಲ. ಜೊತೆಗೆ ಕಮಿಟಿಯವರು ಬಹಿರಂಗ ಹರಾಜು ಮಾಡುವ ಕಾಲದಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ಹರಾಜು ಮಾಡಿಸಿದ್ದಾರೆ. ಇದರೊಂದಿಗೆ ಪ್ರತಿಯನ್ನು ಸಹ ಲಗತ್ತಿಸಿದೆ. ಅಂದು ನಿವೇಶನ ಪಡೆದವರೆಲ್ಲರೂ ಈ ಷರತ್ತು ಉಲ್ಲಂಘನೆ ಮಾಡಿರುವುದರಿಂದ ಅವರಿಗೆ ನಿವೇಶನದ ಹಕ್ಕು ದೊರೆಯದು. ಆದಂದರಿಂದ ಪೂರ್ವದಿಂದಲೂ ಬಡವರು ನೆಲಸಿರುವ ಆ ಜಾಗವನ್ನು ಅವರಿಗೇ ಖಾಯಂ ಮಾಡಿ ಕೊಡಲು ಸರ್ಕಾರ ಕ್ರಮವನ್ನು ಕೈಗೆತ್ತಿಕೊಳ್ಳಲು ಕೋರುತ್ತೇನೆ. ರಾಜಕೀಯ ಪ್ರಭಾವಕ್ಕೆ ಸರ್ಕಾರ ಮಣಿದು ಬಡವರನ್ನು ವಕ್ಕಲೆಬ್ಬಿಸಿದರೆ ಅವರ ಬಾಳು ದುರ್ಬರವಾಗುತ್ತದೆಂದು ಸಹ ತಿಳಿದುಕೊಳ್ಳಬೇಕು.

೨-೦೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಮಾನ್ಯ ಸದಸ್ಯರು ವಿಷಯವನ್ನು ಗಮನಕ್ಕೆ ತಂದಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸುತ್ತೇನೆ.

೧೮) ಬೆಳಗಾಂ ಜಿಲ್ಲೆಯ ಸೌಂದತ್ತಿ ತಾಲ್ಲೂಕು ಶ್ರೀ ಕ್ಷೇತ್ರ ಸೊಗಲದಲ್ಲಿ ಫಿಷ್ ಪಾಂಡ್ ತೆರೆಯುವ ಬಗ್ಗೆ

ಶ್ರೀ ಶಿವಾನಂದ ಎಚ್. ಕೌಜಲಗಿ.—ಬೆಳಗಾಂಜಿಲ್ಲೆ ಸೌಂದತ್ತಿ ತಾಲ್ಲೂಕು ಪೈಕಿ ಶ್ರೀಕ್ಷೇತ್ರ ಸೊಗಲದಲ್ಲಿ ಫಿಷ್ ಪಾಂಡ್ ತೆರೆಯಲು ಯೋಗ್ಯವಾದ ಸ್ಥಳವಿದ್ದು ಅಲ್ಲಿ ಯಾವಾಗಲೂ ನೀರು ಲಭ್ಯವಿರುತ್ತದೆ.

ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಈ ಸ್ಥಳ ಪರಿಶೀಲಿಸಿ ಫಿಷ್ ಪಾಂಡ್ ನಿರ್ಮಿಸಲು ನಕ್ಷೆ ಹಾಗೂ ಅಂದಾಜು ವಿವರಗಳನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಿದಾರೆ. ಆದಕಾರಣ ಕೂಡಲೇ ಇಲ್ಲಿ ಫಿಷ್ ಪಾಂಡ್ ನಿರ್ಮಿಸಲು ಸರ್ಕಾರವು ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಬಂದರು ಮಂತ್ರಿ ಮೀನುಗಾರಿಕೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ.—ಬೆಳಗಾವ ಜಿಲ್ಲೆಯ ಸೌಂದತ್ತಿ ತಾಲ್ಲೂಕಿನ ಯರಗಟ್ಟಿಯಿಂದ ಸುಮಾರು ೫ ಕಿಲೋಮೀಟರ್ ದೂರದ ತಲಕಾಪುರದಲ್ಲಿರುವ ಕೆರೆಯು ಸುಮಾರು ೨ ಎಕರೆಯಷ್ಟು ಜಲ ವಿಸ್ತೀರ್ಣ